ಸಾಕ್ಷಿಯನ್ನು ದಿಃ **01.07.2024** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ.ಆರ್.ಆರ್. ವಕೀಲರಿಂದಃ-

ನಾನು ಈ ದಾವೆಯಲ್ಲಿ 1ನೇ ವಾದಿಯಿಂದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ.

ನಮ್ಮ ಕುಟುಂಬದ ವಂಶವೃಕ್ಷದ ಬಗ್ಗೆ ಎರಡು ಪ್ರಮಾಣಪತ್ರಗಳನ್ನು ಹಾಜರುಪಡಿಸಿದ್ದು ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು. ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ-3 ಎಂದು, ನನ್ನ ಚಿಕ್ಕಮ್ಮ ಶೈಲಜಾರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ-4 ಎಂದು, ನನ್ನ ಅಜ್ಜಿ ಕಮಲಮ್ಮರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ-5 ಎಂದು, ನನ್ನ ತಾತ ರಾಮೇಗೌಡರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ-6 ಎಂದು, ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಡಿಮಾಂಡ ರಜಿಸ್ಟರ ಎಕ್ಸಟ್ರ್ಯಾಕ್ಟನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ-7 ಎಂದು, ಎಂ.ಆರ್.ನಂ.22/1991-92ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ-8 ಎಂದು, ಎಂ.ಆರ್.ನಂ.23/1991-92ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ-9 ಎಂದು, ದಿನಾಂಕ 13.10.2010ರಲ್ಲಿ ನನ್ನ ತಾತ ರಾಮೇಗೌಡರವರು ಮಾಡಿದ 2 ರಿಂದ 4ನೇ ಪ್ರತಿವಾದಿಯರ ಹೆಸರಿಗೆ ಮಾಡಿದ ನೋಂದಾಯಿತ ಮರಣ ಶಾಸನ ಪತ್ರದ ದೃಢೀಕೃತ ನಕಲನ್ನು ನಿಪಿ-10 ಎಂದು, ದಿನಾಂಕ 06.12.2021ರಂದು 4ನೇ ಪ್ರತಿವಾದಿಯು ತಹಶೀಲ್ದಾರ ಹುಣಸೂರು ತಾಲ್ಲೂಕುರವರಿಗೆ ನೀಡಿದ ಅರ್ಜಿಯ ದೃಢೀಕೃತ ನಕಲನ್ನು ನಿಪಿ-11 ಎಂದು, ಮೂರು ಇ.ಸಿ.ಗಳನ್ನು ನಿಪಿ-12 ರಿಂದ 14 ಎಂದು, ಎಂ.ಆರ್.ನಂ. ಹೆಚ್-17/2021-22ರ ದೃಢೀಕೃತ ನಕಲನ್ನು ನಿಪಿ-15 ಎಂದು, ಖಾತೆ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದ ಬಗ್ಗೆ ಸ್ವೀಕೃತಿಯ ದೃಢೀಕೃತ ನಕಲನ್ನು ನಿಪಿ-16 ಎಂದು, ಸರ್ವೇ ನಂ. 04/2ರ ಪಹಣಿಯ ದೃಢೀಕೃತ ನಕಲನ್ನು ನಿಪಿ-17 ಎಂದು, ಸರ್ವೇ ನಂ. 78/14

ರ ಪಹಣಿಯ ಮೂರು ದೃಢೀಕೃತ ನಕಲುಗಳನ್ನು ನಿಪಿ–18 ರಿಂದ 20 ಎಂದು, ಸರ್ವೇ ನಂ. 78/23ರ ಮೂರು ಪಹಣಿಗಳ ದೃಢೀಕೃತ ನಕಲುಗಳನ್ನು ನಿಪಿ–21 ರಿಂದ 23 ಎಂದು, ಸರ್ವೇ ನಂ. 78/7ರ ಎರಡು ಪಹಣಿಗಳ ದೃಢೀಕೃತ ನಕಲುಗಳನ್ನು ನಿಪಿ–24 ರಿಂದ 25 ಎಂದು, ಸರ್ವೇ ನಂ. 5ರ ಪಹಣಿಯ ದೃಢೀಕೃತ ನಕಲುನ್ನು ನಿಪಿ–26 ಎಂದು, ಸರ್ವೇ ನಂ. 5/1ಕ್ಕೆ ಸಂಬಂಧಿಸಿದ ನಾಲ್ಕು ಪಹಣಿಗಳನ್ನು ನಿಪಿ–27 ರಿಂದ 30 ಎಂದು, ಸರ್ವೇ ನಂ. 5ಕ್ಕೆ ಸಂಬಂಧಿಸಿದ ಪಹಣಿಯನ್ನು ನಿಪಿ–31 ಎಂದು, ಸರ್ವೇ ನಂ. 78/7ರ ಪಹಣಿಯನ್ನು ನಿಪಿ–32 ಎಂದು, ಸರ್ವೇ ನಂ. 78/23ರ ಎರಡು ಪಹಣಿಗಳನ್ನು ನಿಪಿ–33 ಮತ್ತು 34 ಎಂದು, ಸರ್ವೇ ನಂ. 78ರ ಮೂರು ಪಹಣಿಗಳನ್ನು ನಿಪಿ–35 ರಿಂದ 37 ಎಂದು, ಸರ್ವೇ ನಂ. 78/14ರ ಪಹಣಿಯನ್ನು ನಿಪಿ–38 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.